ತುಮಕೂರು ಡಿಸ್ಟ್ರಿಕ್ಟ್.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ:—ಸ್ ೧೮೯೬—97ನೇ ಸಾಲಿಗೆ (ಅಂದರೆ 1896ನೇ ಜುಲೈ ಗುರಿ) ಲಾಗಾಯತು 1897ನೇ ಜೂ 30ರ ವರಿಗೆ) ಮದ್ದಗಿರಿ ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನ ಮದ್ದಗಿರಿ ತಾಲ್ಲೂಕು ಕಚೇರಿಯಲ್ಲಿ 1896ನೇ ಡಿಸೆಂಬರ್ 28ನೇ ತಾರೀಖಿನ ಬೆಳಿಗ್ಗೆ 11 ಘಂಟೆಗೆ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಅಮಲ್ದಾರು ಅಥವಾ ಶಿರಸ್ತೇದಾರು ಹರಾಜು ಮಾಡಿಸುತ್ತಾರೆ..

3. ಛಡಸವಾಲ್ ಅಂಗೀಕರಿಸತಕ್ಕದ್ದು ತುಮಕೂರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ ಸಾಹೆಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡಬೇಕು; ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಛಡಸವಾಲ್ದಾರರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ ಮಾಡಬೇಕಲ್ಲದೆ ಹರಾಜು ಮಂಜೂರ ಮಾಡಲ್ಪಟ್ಟ ಸಂಗತಿ ಅಮಲ್ದಾರರಿಂದ ಛಡಸವಾಲ್ದಾರರಿಗೆ ತಿಳಿಸಲ್ಪಟ್ಟು ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಛಡಸವಾಲ್ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆಯಂತಾಗುವ ಲೋಕಲ್‌ಸೆಸ್ ದೇಖೀಲ್ ಛಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಯಿಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ. ಹಾಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡದಿದ್ದರೂ ಅಥವಾ ಬಾಕಿ ಮೊಬಲಗು ಪಾವತಿ ಮಾಡದಿದ್ದರೂ ಸದರೀ ಹಕ್ಕುದಾರಿಯು ಛಡಸವಾಲ್ದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ಒಳಪಟ್ಟು ಪುನಹ ವಿಕ್ರಯಿಸಲ್ಪಡುತ್ತೆ.

6. ಇಜಾರೆದಾರು ಹಿಡುವಳಿ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ ಹಕ್ಕಿಗೆ ಆತಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರ ಅಭ್ಯಂತರವೇನು ಇರುವದಿಲ್ಲ. ಪರಂತು ಅಂಥಾ ಜಮೀನುಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನು ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರು ಅಗಿಯಕೂಡದು. ಬಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನು ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಯಿಪ್ಪ್ಪತ್ತು ಮಣ ಕಲ್ಲುಗಳು ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಪ್ಪಿಲ್ಲಗಳು ನಮೂದು ಕಂಡು ಆಯಾ ತಾಲ್ಲೂಕು ಅಮಲ್ದಾರಿಂದ ಪಾಸು ಲೈಸೆನ್ಸನ್ನು ಪಡಿಯದೆ ಕಲ್ಲುಗಳನ್ನು ಇಜಾರೇದಾರು ಸಾಗಿಸಕೂಡದು.

ಎಂ. ನಾರಾಯಣರಾವ್,
ಡೆಪ್ಯುಟಿ ಕಮ್ಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ಛಡಸ್ವಾಲ್ ಇಲಾಖೆ.

ನೋಟಿಫಿಕೇಷನ್.

ಸ್ ೧೮೭೮ನೇ ಇನವಿ ಫಾರೆಸ್ಟ್ ರೂಲ್ಸ್ 37ನೇ ಸೆಕ್ಷನ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೆನಂದರೆ,—ಶಿವಮೊಗ್ಗ ಡಿಸ್ಟ್ರಿಕ್ಟ್ ಶಿವಮೊಗ್ಗ ತಾಲ್ಲೂಕು ಬೆಂಕಿಪುರದ ಟ್ರಾವೆಲರ್ಸ್ ಬಂಗ್ಲೆ ಬಳಿ ಭದ್ರಾನದಿಯಲ್ಲಿ ಈ ಕೆಳಗೆ ನಮೂದಿಸಿರುವ ನಾಟೂ ತೇಲಿಬಂದು ಸಿಕ್ಕಿ ಇರುತ್ತೆ.

ಮೇಲ್ಕಂಡ ನಾಟೂಕ್ಕೆ ಹಕ್ಕು ಪುಳ್ಳವರು ಈ ಸ್ತಿಹಾರ್ ತಾರೀಖು ಲಾಗಾಯತು ಎರಡು ತಿಂಗಳ ವಳಗಾಗಿ ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕ್ಷನರವೇಟರವರ ರೂಬರೂ ಖುದ್ದಾಗಿ ಆಗಲಿ ಅಥವಾ ಕ್ರಮವಾಗಿ ಅಧಿಕಾರ ಪಡೆದ ಮುಖ್ತಾರೀಕನ ಮೂಲಕವಾಗಲಿ ಹಾಜರಾಗಿ ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಳ್ಳಬೇಕು. ಆ ತಾರೀಖಿನ ನಂತರ ಬರುವ ಹಕ್ಕುದಾರಿಯನ್ನು ಅಂಗೀಕರಿಸದೆ ಸರಕಾರದ ತರಫಿ ಸದರೀ ನಾಟೂವನ್ನು ಹರಾಜು ಮಾಡಲ್ಪಡುವದು.

ನಾಟೂ ತಪಸೀಲ್.

ನಂಬರ್.	ಜಾತಿ.	ಉಳತೆ ಲಾಂಬಿ ಅಡಿ.	ಸುತ್ತಳತೆ ಅಡಿ.	ಷರಾ.
1	ಸಾಗುವಾನಿ ನಾಟೂ ..	14 ಅಡಿ, 4 ಅಂಗುಲ	7 ಅಡಿ, 8 ಅಂಗುಲ	

ತಾರೀಖು 24ನೇ ನವೆಂಬರ್ 1896.

ಸ್ ೧೮೯೦ನೇ ಇಸವಿ ಫಿಬ್ರವರಿ ತಾರೀಖು 15ನೇ ಮೈಸೂರ್ ಗೆಜೆಟ್ 2ನೇ ಭಾಗದ ಪುಟದಲ್ಲಿ ಘೋಷಿಸ್ ಮಾಡಿರುವ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ ನೋಟಿಫಿಕೇಷನ್ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,— ಈ ಕೆಳಗೆ ನಮೂದಿಸುವ ಶಿವಮೊಗ್ಗ ಡಿಸ್ಟ್ರಿಕ್ಟಿನ ಬೆಂಕಿಯಿಂದ ರಕ್ಷಿಸಲ್ಪಟ್ಟ ಸ್ಟೇಟ್ ಫಾರೆಸ್ಟ್ಸು ಮತ್ತು ಪ್ಲಾಂಟೇಷನ್‌ಗಳನ್ನ 1897ನೇ ಇಸವಿ ಜನವರಿ 1ನೇ ತಾರೀಖು ಲಾಗಾಯತು ಮೇ ಆಖೈರ್ ವರಿಗೂ ಬಂದ್ ಮಾಡಲ್ಪಟ್ಟಿರುತ್ತೆ. ಅಂಬುಗಾರರಿಗೂ, ಶಿಕಾರಿಗಳಿಗೂ, ಬೇಟೆಗಾರರಿಗೂ ಸಹ ಲೈಸೆನ್ಸ್ ಕೊಡಲ್ಪಡುವದಿಲ್ಲ. ರೂಲ್ಸ್ ಅತಿಕ್ರಮಿಸಿ ಪ್ರವೇಶಿಸುವವರನ್ನ ಕ್ರಮವಾಗಿ ಶಿಕ್ಷಿಸಲ್ಪಡುತ್ತೆ.

ನಂಬರ್.	ಫಾರೆಸ್ಟ್ಸುಗಳ ಹೆಸರು.	ತಾಲ್ಲೂಕುಗಳ ಹೆಸರು.
1	ಶಂಕರಗುಡ್ಡಾ, ಭೂತನಬೈಲ್ ಫಾರೆಸ್ಟ್	ಶಿವಮೊಗ್ಗಾ, ತೀರ್ಥಹಳ್ಳಿ
2	ಪುರದಾಳ	ಶಿವಮೊಗ್ಗಾ
3	ಕುಂಜೇನಹಳ್ಳಿ	ಡಿಟೋ
4	ಅನುಪಿನಕಟ್ಟೆ ಪ್ಲಾಂಟೇಷನ್	ಡಿಟೋ
5	ಸಕ್ರೆಬೈಲ್ ಫಾರೆಸ್ಟ್	ಡಿಟೋ ತೀರ್ಥಹಳ್ಳಿ
6	ಡಿಟೋ ಪ್ಲಾಂಟೇಷನ್	ಶಿವಮೊಗ್ಗಾ
7	ಜೋರನೆಡೆಹಳ್ಳಿ	ಡಿಟೋ
8	ಆಯನೂರು ಪ್ಲಾಂಟೇಷನ್	ಡಿಟೋ
9	ಆಲಕೊಳ ಡಿಟೋ	ಡಿಟೋ
10	ಕರ್ಲಕೊಪ್ಪ ಸಂದಲ್ ಪ್ಲಾಂಟೇಷನ್	ಡಿಟೋ
11	ಉಂಬಳಿ ಬೈಲ್ ಹುಣಸೆಕಟ್ಟೆ	ಡಿಟೋ
12	ಆಲದಹಾರ	ಡಿಟೋ
13	ಕುಂಚಿ	ಡಿಟೋ
14	ಮಸರೂರು	ನಗರ
15	ಕುಕ್ಕವಾಡಾ ಉಬ್ರಾಣಿ	ಶಿವಮೊಗ್ಗಾ, ಚನ್ನಗಿರಿ, ತರೀಕೆರೆ
16	ಚನ್ನಗಿರಿ ಪ್ಲಾಂಟೇಷನ್	ಚನ್ನಗಿರಿ
17	ತೆಲಗಡ್ತಿ, ಅರತೆಲಗಡ್ತಿ	ಸೊರಬ
18	ಬೆಟ್ಟದಕುರ್ಲಿ	ಡಿಟೋ
19	ಸಿದ್ದೇಹಳ್ಳಿ ಪ್ಲಾಂಟೇಷನ್	ಡಿಟೋ
20	ಹಳೆಸೊರಬ ಡಿಟೋ	ಡಿಟೋ
21	ಚಂದ್ರಗುತ್ತಿ	ಡಿಟೋ
22	ಕವಡಿ	ಡಿಟೋ
23	ಕವಲಿ	ಶಿಕಾರಿಪುರ
24	ತೊಗರಶಿ	ಡಿಟೋ
25	ಬಸವನಂದಿಹಳ್ಳಿ	ಡಿಟೋ
26	ಕಾಳೇನಹಳ್ಳಿ ಪ್ಲಾಂಟೇಷನ್	ಡಿಟೋ
27	ಗಂಗವನಸರ ಸ್ಟೇಟ್ ಫಾರೆಸ್ಟ್ಸು ಮತ್ತು ಹಾರೋಗೊಪ್ಪ ಯೆರೆಕಟ್ಟೆ ಕಾಪಿಸ ಜಾಗಾ	ಡಿಟೋ ಹೊನ್ನಾಳಿ
28	ಕರಡಿಪಟ್ಟ	
29	ಚಂದ್ರಕಲ	ಡಿಟೋ ಶಿವಮೊಗ್ಗಾ
30	ಬೆಳಂದೂರು	ಸಿಕಾರಿಪುರ
31	ಮಲಂದೂರು	ಡಿಟೋ
32	ಮಲೆಬೆನ್ನೂರು	ಸಾಗರ
		ಹೊನ್ನಾಳಿ, ದಾವಣಗೆರೆ

ಸಿ. ನಾರಾಯಣರಾವ್,
ಡೆಪ್ಯೂಟಿ ಕ್ಯ ಸರ್ವೇಯರ್.

ನಗರದ ಡಿವಿಜ್ಯ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟ್‌ನಲ್ಲಿ.

ಸ್ ೧೮೯೬—97ನೇ ಇಸವಿ ಮಿ॥ ಅರ್ಜೀ ನಂಬರ್ 61.

ಮೃತಪಟ್ಟ ಚಟ್ಟನಹಳ್ಳಿ ನಾಗಪ್ಪ ಯಂಬವರ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಶಿವಮೊಗ್ಗಾ ತಾಲ್ಲೂಕು ಕಸಬಾ ಮಾಗಣಿ ಅನುಪಿನಕಟ್ಟೆ ವಾಸಸ್ಥಳು ಚನ್ನಮ್ಮನು, ಮೃತಪಟ್ಟ ಸದರೀ ನಾಗಪ್ಪ ಯಂಬವರಿಗೆ ಹೆಂಡತಿ ಆಗಜೇಕೆಂಬ ಹಕ್ಕು ದಾರಿ ಮೇಲೆ ಅನುಪಿನಕಟ್ಟೆ ಸ್ಥಳದ ಚನ್ನಮ್ಮ ಯಂಬವಳು, ಅನುಪಿನಕಟ್ಟೆ ವಾಸಸ್ಥರಾಗಿ ಮೃತಪಟ್ಟ ನಾಗಪ್ಪ ಯಂಬವರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಚನ್ನಮ್ಮ ಯಂಬವಳ ಅರ್ಜಿಯನ್ನು ಸ್ ೧೮೯೭ನೇ ಇಸವಿ ಜನವರಿ ತಿಂಗಳು ತಾರೀಖು 15 ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗಪ್ಪ ಯಂಬವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪಾರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬ನೇ ಇಸವಿ ಡಿಸೆಂಬರ್ ತಿಂಗಳ 1ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತಿನಿಂದ ನೆ ಕೊಡೋಣಾಗಿದೆ.

ಎಂ. ರಾಮಸ್ವಾಮಿ ಅಯ್ಯರ್, ಡಿಸ್ಟ್ರಿಕ್ಟ್ ಜಡ್ಜ್.